ಹಂದಿಗಳು ಸತ್ತರೆ, ಈ ಸಲ ಹಾಕಿದ್ದ ಮಘೆ ಸೌತೆಕಾಯಿಯನ್ನು ಹೆಗಡೆಯವರ ಮನೆಗೆ ಕೊಡಬೇಕೆಂದು ನಿಶ್ಚಯಿಸಿಕೊಂಡ. ಹೆಗಡೆಯವರು, 'ಬೊಮ್ಮನಲ್ಲಿ ಮಾತನ್ನು ಆಡಬೇಕು ಬಂದು ಹೋಗು' ಅಂತ ಕರೆದಾಗಲೂ ಹೋಗದಿರುವ ಬಗ್ಗೆ ಬೈದರೆ ಎಂದುಕೊಂಡು ಭಯವಾಯಿತು. ಅವರನ್ನು ಸೌತೆಕಾಯಿ ಕೊಟ್ಟು ಸಮಾಧಾನ ಮಾಡಬೇಕು ಎಂದುಕೊಂಡು ಮನೆಗೆ ಬಂದ. ಬಂದವನು ರಾತ್ರಿಯ ಊಟವನ್ನು ಮಾಡಿ, ಹಾಸಿಗೆಯನ್ನು ಹಾಸಿ ಮಲಗುವುದಕ್ಕೆ ಸಿದ್ಧನಾಗಿ ಮಲಗಿದ. ಏನೇನೋ ಯೋಚಿಸುತ್ತಲೇ ಗಾಢವಾದ ನಿದ್ರೆಗೆ ಜಾರಿದ್ದ. ಅದು ಮಧ್ಯರಾತ್ರಿಯ ಹೊತ್ತು. ದೊಡ್ಡದಾಗಿ ಮದ್ದು ಸಿಡಿದಿರುವ ಸದ್ದು ಕೇಳಿಸಿತು. ಆ ಭಯಂಕರ ಸದ್ದಿಗೆ ಬೊಮ್ಮನಿಗೆ ಎಚ್ಚರವಾಯಿತು. ಒಮ್ಮೆಗೆ ಭಯದಿಂದ ಎದ್ದು ಕುಳಿತ. ಏನಾಯಿತು ಎಂದು ಅರಿವಾಗ ಮದ್ದಿನ ಸದ್ದೆಂಬುದು ಖಾತ್ರಿಯಾಗಿತ್ತು. ಅದನ್ನು ತಿಳಿಯುತ್ತಲೇ ಸಂತೋಷದಿಂದ ಹಾಸಿಗೆಯಿಂದ ಮೇಲೆದ್ದ. ಅಂತು ತನ್ನ ಬಲೆಗೆ ಹಂದಿ ಸತ್ತಿರುವ ಬಗ್ಗೆ ಹರ್ಷಗೊಂಡಿದ್ದ. ಈ ಖುಷಿಯನ್ನು ಕಲ್ಲಮ್ಮನಿಗೆ ಹೇಳಬೇಕೆಂದು ನೋಡಿದರೆ, ಅವಳು ಗಾಢವಾದ ನಿದ್ರೆಯಲ್ಲಿ ಗೊರಕೆ ಹೊಡೆಯುತ್ತಿದ್ದಳು. ಎರಡೆರಡು ಬಾರಿ ಕರೆದರೂ ಅವಳು ಮಾತ್ರ ಎಚ್ಚರಗೊಂಡಿರಲಿಲ್ಲ. ಅವಳ ಹಣೆಬರಹವೇ ಇಷ್ಟು ಎಂದು ಬೈದುಕೊಂಡ. ಇಷ್ಟು ದಿನ ತನ್ನೊಳಗೆ ಹುದುಗಿದ್ದ ಭಾರ ಕಡಿಮೆಯಾದಂತೆ ಅನ್ನಿಸಿತ್ತು. ದಿನಾಲೂ ಆರು ಗಂಟೆಗೆ ಎದ್ದೇಳುವ ಬೊಮ್ಮನಿಗೆ ಆ ದಿನ ಬೇಗ ಏಳಲು ಸಾಧ್ಯವಾಗಲಿಲ್ಲ. ಸ್ವಲ್ಪ ತಡವಾಗಿ ಎದ್ದು ಬಂದು ಜಗುಲಿಗೆ ಬಂದು ಬೀಡಿ ಸೇದುತ್ತ ಹಂದಿಯ ಬಗ್ಗೆ ಯೋಚಿಸುತ್ತಲೇ ಕುಳಿತಿದ್ದ. ಮದ್ದಿನ ಸ್ಫೋಟಕ್ಕೆ ಹಂದಿಯ ಗಂಟಲು ಹರಿದು, ಕೊರಳು ಕಿತ್ತು, ಈಗಾಗಲೇ ಸತ್ತು ಹೋಗಿರಬಹುದು ಎಂದು ಅಂದುಕೊಳ್ಳುವಾಗ ಒಳಗೊಳಗೆ ಸಂತೋಷವಾಯಿತು. ಇಷ್ಟು ದಿನ ಎಷ್ಟೆಲ್ಲ ತಾಪತ್ರಯಗಳನ್ನು ಕೊಟ್ಟ ಹಂದಿಗಳಿಂದ ಕೊನೆಗೂ ಮುಕ್ತನಾಗಿರುವ ಬಗ್ಗೆ ಖುಷಿ ಎನಿಸಿತ್ತು. ಅವು ಹೇಗೆ ಸತ್ತಿರಬಹುದು ನೋಡುವ ಕುತೂಹಲ ಮನಸ್ಸಿನಲ್ಲಿ ಬಂತಾದರೂ ಬೇಡವೆಂದುಕೊಂಡು ಹಾಗೇ ಕುಳಿತುಕೊಂಡ. ಎಂದಿನಂತೆ ಕಲ್ಲಮ್ಮ ತಂಗಳು ಅನ್ನದ ತಟ್ಟೆಯನ್ನು ಹಿಡಿದು ಟಾಮಿ, ಬೈರ ಎಂದು ಕೂಗುತ್ತ ಅಂಗಳ ತುದಿಗೆ ಬಂದು ನಾಯಿಗಳನ್ನು ಕರೆದಳು. ಎಷ್ಟು ಕರೆದರೂ ಅವು ಮಾತ್ರ ಯಾಕೋ ಪತ್ತೆಯಾಗಿರಲಿಲ್ಲ. 'ಸುಟ್ ನಾಯಿ ಎಲ್ಲಿ ಸತ್ತವ್ರೋ, ಅನ್ನ ತಿನ್ನಕ್ಕೂ ಬರಲ್ಲ' ಎನ್ನುತ್ತ ಕಲ್ಲಮ್ಮ ನಾಯಿಗೆ ತಟ್ಟೆಗಳಿಗೆ ಅನ್ನ ಹಾಕಿ ಅಂಗಳದಲ್ಲಿ ಓಡಾಡಿದಳು. ಅಡಿಮಂಚದಲ್ಲಿ ಕುಳಿತಿದ್ದ ಬೊಮ್ಮನಿಗೆ ನಾಯಿಗಳು ಇಲ್ಲವೆಂಬುದನ್ನು ತಿಳಿಯುವಾಗ ಯಾಕೋ ಮದ್ದು ತನ್ನೊಳಗೆ ಸ್ಫೋಟವಾದಂತೆ ಅನ್ನಿಸಿತು. ಭಯವಾಯಿತು. ತನ್ನ ಮದ್ದಿಗೆ ನಾಯಿ ಸತ್ತವೆಂದು ಕಿಟಾರನೆ ಕಿರುಚಿದ್ದ. ಅವನ ಕೂಗಿಗೆ ಭಯಗೊಂಡ ಕಲ್ಲಮ್ಮ, ಅಡುಗೆಯ ಮನೆಯಿಂದ ಬೊಮ್ಮನ ಹಾಸಿಗೆಯ ಬಳಿಗೆ ಓಡೋಡಿ ಬಂದು ಏನಾಯಿತು ಎಂದು ವಿಚಾರಿಸಿಕೊಂಡಳು. ಹೆಂಡತಿ ಮಾತನ್ನು ಆಡುವಾಗ ಬೊಮ್ಮ ಅರಿವಿನ ಪ್ರಪಂಚಕ್ಕೆ ಬಂದಿದ್ದ. ಇಲ್ಲಿಯವರೆಗೆ ನಾಯಿ ಮದ್ದನ್ನು ತಿಂದಿದ್ದು, ಮದ್ದು ಸ್ಫೋಟಗೊಂಡಿದ್ದು, ಅವುಗಳಿಂದ ನಾಯಿಗಳು ಸತ್ತಿದ್ದು ಇವೆಲ್ಲವೂ ತನ್ನ ಕನಸು ಎಂದು ತಿಳಿಯಿತು. ಯಾರಿಗೂ ಏನೂ ಆಗದಿರುವ ಬಗ್ಗೆ ಸಮಾಧಾನವಾಯಿತು.

ನಾಯಿಗಳು ತಾವು ಬದುಕಿದ್ದೇವೆ ಎಂಬುದನ್ನು ಬೊಮ್ಮನಿಗೆ ತೋರಿಸುವುದಕ್ಕೆ ಎಂಬಂತೆ ಮನೆಯ ಅಂಗಳಲ್ಲಿ ಇದ್ದಕ್ಕಿದ್ದ ಹಾಗೆ ಜೋರಾಗಿ ಬೊಗಳುವುದಕ್ಕೆ ಪ್ರಾರಂಭಿಸಿದ್ದವು. ನಾಯಿಗಳು ಏಕೆ ಹೀಗೆ ಕೂಗುತ್ತವೆ ಎನ್ನುತ್ತ ಬೊಮ್ಮ ಹಾಸಿಗೆಯಲ್ಲಿಯೇ ಗೊಣಗಿಕೊಂಡ. ಅದೇನೆಂದು ನೋಡುವುದಕ್ಕೆ ಕಲ್ಲಮ್ಮ ಮನೆಯೊಳಗಿನಿಂದ ಬಂದು ಬಾಗಿಲಿನಲ್ಲಿ ಇಣುಕಿದಳು. ಭಯಗೊಂಡವಳಂತೆ ತಕ್ಷಣವೇ ಉಸುರಿಗೆ ಹಾಸಿಗೆಯಲ್ಲಿ ಮಲಗಿದ್ದ ಗಂಡನ ಬಳಿಗೆ ಓಡಿ ಬಂದು, 'ಪಾಂಟು ಸರ್ಟು ಹಾಕೊಂಡಿರೊ ಯಾರೋ ಬೈಕ್ ಮೇಲೆ ನಮ್ಮನಿ ಕಡಿಗೆ ಬತ್ತಾ ಐದಾರೆ ' ಎಂದಳು. ಅದನ್ನು ಕೇಳುತ್ತಲೇ ಧೃತಿಗೆಟ್ಟ ಬೊಮ್ಮ, ಹಾಸಿಗೆಯಿಂದ ಒಮ್ಮೆಗೆ ಮೇಲೆದ್ದು, ಒಂದೇ ಜಿಗಿತಕ್ಕೆ ಅಡುಗೆ ಮನೆಯ ಬಾಗಿಲ ಮೂಲಕ ಮನೆಯ ಹಿಂದಿನ ಗುಡ್ಡದಲ್ಲಿ ಓಡುವುದಕ್ಕೆ ಪ್ರಾರಂಭಿಸಿದ್ದ. ಏನೂ ತಿಳಿಯದೇ ಕಲ್ಲಮ್ಮ ಕೂಗುತ್ತಿದ್ದಳು.

●